**ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ. ನಂಜನಗೂಡು ತಾಲ್ಲೂಕು.**

# ಕಲಿಕಾ ಸಂಗಮ

**ಮೊದಲ ವಾರ - ಅಭ್ಯಾಸ ಹಾಳೆ-01** **ಕಲಿಕಾಂಶ : ನಮ್ಮ ರಾಜ್ಯ ಕರ್ನಾಟಕ** **ತರಗತಿ - 7**

ನಮ್ಮ ರಾಜ್ಯ ಕರ್ನಾಟಕ. ನಮ್ಮ ರಾಜ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯಿದೆ. ನಮ್ಮರಾಜ್ಯದಲ್ಲಿ ಆಡಳಿತದ ಅನುಕೂಲಕ್ಕೆ ನಾಲ್ಕು ಕಂದಾಯ ವಿಭಾಗಗಳನ್ನು ರೂಪಿಸಲಾಗಿದೆ. ಅವುಗಳು ಹೀಗಿವೆ.

1) ಬೆಂಗಳೂರು ವಿಭಾಗ
2) ಮೈಸೂರು ವಿಭಾಗ
3) ಬೆಳಗಾವಿ ವಿಭಾಗ
4) ಕಲಬುರಗಿ ವಿಭಾಗ




❖ **ಈ ಕೆಳಗಿನ ಕರ್ನಾಟಕ ರಾಜ್ಯದ ಭೂಪಟದಲ್ಲಿ 4 ಕಂದಾಯ ವಿಭಾಗಗಳನ್ನು ಗುರ್ತಿಸು.**



1) <u>ಬೆಂಗಳೂರು ವಿಭಾಗ :</u>

ನಮ್ಮ ರಾಜ್ಯದ ರಾಜಧಾನಿ ಬೆಂಗಳೂರು.
ಇದು ಒಂದು ಆಡಳಿತ ಕಂದಾಯ ವಿಭಾಗವಾಗಿದೆ.
ಈ ವಿಭಾಗದಲ್ಲಿ 9 ಜಿಲ್ಲೆಗಳಿವೆ. ಅವುಗಳೆಂದರೆ,

1) ಬೆಂಗಳೂರು ನಗರ
2) ಬೆಂಗಳೂರು ಗ್ರಾಮೀಣ
3) ಕೋಲಾರ
4) ಚಿಕ್ಕಬಳ್ಳಾಪುರ
5) ರಾಮನಗರ
6) ತುಮಕೂರು
7) ಚಿತ್ರದುರ್ಗ
8) ದಾವಣಗೆರೆ
9) ಶಿವಮೊಗ್ಗ




**ಈ ಕೆಳಗಿನ ಕರ್ನಾಟಕ ಭೂಪಟದಲ್ಲಿ ಬೆಂಗಳೂರು ವಿಭಾಗದ ಜಿಲ್ಲೆಗಳಿಗೆ ಬಣ್ಣ ತುಂಬು :-**



**ಬೆಂಗಳೂರು ವಿಭಾಗದಲ್ಲಿ ಹಲವಾರು ರಾಜಮನೆತನಗಳು ಆಳ್ವಿಕೆ ಮಾಡಿರುತ್ತಾರೆ. ಜೊತೆಗೆ ಪ್ರಾಕೃತಿಕ ಸಂಪನ್ಮೂಲಗಳಾದ ನದಿ, ಕಾಡು, ಖನಿಜಗಳು ವನ್ಯಮೃಗಗಳು ಮುಂತಾದವುಗಳನ್ನು ಒಳಗೊಂಡಿದೆ. ಶಿಕ್ಷಣ, ಕೃಷಿ, ಕೈಗಾರಿಕೆಗಳ ಸಾಂಸ್ಕೃತಿಕ ಸಮೃದ್ಧಿಯನ್ನು ಸಂಕ್ಷಿಪ್ತವಾಗಿ ತಿಳಿಯೋಣ.**



## ❖ ಮೇಲಿನ ಅಂಶಗಳನ್ನು ಓದಿದ ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1) ಕೋಲಾರದಲ್ಲಿ ______________ ಗಣಿಯಿದೆ.

2) ರೇಷ್ಮೆ ಉದ್ಯಮಕ್ಕೆ ಪ್ರಮುಖ ಕಚ್ಚಾವಸ್ತು ______________

3) ಆದಿಚುಂಚನಗಿರಿ : ರಾಮನಗರ : : ಸಿದ್ದಗಂಗಾಮಠ : ______________

4) ಗಂಗರ ರಾಜಧಾನಿ : ______________

## ❖ ಹೊಂದಿಸಿ ಬರೆಯಿರಿ :

| | | | |
|---|---|---|---|
| 5) ಪರಿಸರ ಸಂರಕ್ಷಣೆ | - | ಸರ್.ಎಂ. ವಿಶ್ವೇಶ್ವರಯ್ಯ | ______________ |
| 6) ರಾಷ್ಟ್ರೀಯ ಉದ್ಯಾನವನ | - | ಸಾಲುಮರದ ತಿಮ್ಮಕ್ಕ | ______________ |
| 7) ಭಾರತರತ್ನ | - | ಅನಿಲ್ ಕುಂಬ್ಳೆ | ______________ |
| 8) ದೇಶದ ಕ್ರಿಕೆಟಿಗ | - | ಬನ್ನೇರುಘಟ್ಟ | ______________ |

## ❖ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

9) ಬೆಂಗಳೂರು ವಿಭಾಗದ ರಾಜಮನೆತನಗಳನ್ನು ಹೆಸರಿಸಿ.

______________________________________________

______________________________________________

______________________________________________

10) ಬೆಂಗಳೂರು ವಿಬಾಗಕ್ಕೆ ಸೇರಿದ ನದಿಗಳನ್ನು ಹೆಸರಿಸಿ.

______________________________________________

______________________________________________

______________________________________________

# ಬೆಂಗಳೂರು ವಿಭಾಗದ ಜಿಲ್ಲೆಗಳ ವೈಶಿಷ್ಟ್ಯತೆಗಳು

**ವಿದ್ಯಾರ್ಥಿಗಳೇ, ಕೆಳಗೆ ನೀಡಿರುವ ಪ್ರಮುಖ ಅಂಶಗಳನ್ನು ಗಮನವಿಟ್ಟು ಓದಿ, ನಮೂದಿಸಿರುವ ಚಟುವಟಿಕೆಗಳಿಗೆ ಸೂಕ್ತವಾಗಿ ಉತ್ತರಿಸಿ:**

- **ಬೆಂಗಳೂರು ನಗರ :** ಬೆಂಗಳೂರು ನಗರವು ನಮ್ಮ ರಾಜಧಾನಿಯಾಗಿದ್ದು ವಿಧಾನಸೌಧ ಉಚ್ಚನ್ಯಾಯಾಲಯ ಲಾಲ್ ಬಾಗ್, ಕಬ್ಬನ್ ಉದ್ಯಾನವನ, ನಂದಿ ಬೆಟ್ಟ, ಬನ್ನೇರುಘಟ್ಟ ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ.



ಉಚ್ಚ ನ್ಯಾಯಾಲಯ



ವಿಧಾನ ಸೌಧ

- **ಬೆಂಗಳೂರು ಗ್ರಾಮಾಂತರ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೇವನಹಳ್ಳಿ ಕೆಂಪೇಗೌಡ ವಿಮಾನನಿಲ್ದಾಣವನ್ನು ಕಾಣಬಹುದು. ಶಿವಗಂಗೆ ಪ್ರಸಿದ್ಧ ಯಾತ್ರಾ ಕ್ಷೇತ್ರವಾಗಿದೆ.



ದೇವನಹಳ್ಳಿ ವಿಮಾನ ನಿಲ್ದಾಣ

- **ರಾಮನಗರ ಜಿಲ್ಲೆ :** ಈ ಜಿಲ್ಲೆಯು ಚನ್ನಪಟ್ಟಣದ ಗೊಂಬೆಗಳು ಹಾಗೂ ರೇಷ್ಮೆ ಉತ್ಪಾದನೆಗೆ ಹೆಸರುವಾಸಿಯಾಗಿದೆ.



ಚನ್ನಪಟ್ಟಣದ ಗೊಂಬೆಗಳು

- **ಚಿಕ್ಕಬಳ್ಳಾಪುರ ಜಿಲ್ಲೆ :** ಕೈವಾರ ದೇವಾಲಯ, ವಿಧುರಾಶ್ವತ್ಥ, ನಂದಿ ದುರ್ಗವು ಈ ಜಿಲ್ಲೆಯಲ್ಲಿ ಕಂಡುಬರುತ್ತದೆ.



ನಂದಿದುರ್ಗ



ಅಂತರಗಂಗೆ

- **ಕೋಲಾರ ಜಿಲ್ಲೆ :** ಚಿನ್ನದ ಗಣಿಗೆ ಹೆಸರುವಾಸಿಯಾಗಿದ್ದು, ಅಂತರಗಂಗೆ, ಹೈದರಾಲಿ ದರ್ಗಾ, ಶ್ರೀ ಪಾದರಾಯರ ಬೃಂದಾವನ ಇಲ್ಲಿ ಕಂಡುಬರುವ ದೃಶ್ಯಗಳು.

- **ತುಮಕೂರು ಜಿಲ್ಲೆ :** ತೆಂಗಿನಕಾಯಿ ಬೆಳೆಗೆ ಪ್ರಸಿದ್ಧಿಯಾಗಿದೆ. ಇಲ್ಲಿ ಏಷ್ಯಾ ಖಂಡದಲ್ಲಿಯೇ ಎತ್ತರವಾದ ಮಧುಗಿರಿ ಬೆಟ್ಟವನ್ನು ಕಾಣಬಹುದು.



**ಮಧುಗಿರಿ ಬೆಟ್ಟ**

- **ಚಿತ್ರದುರ್ಗ ಜಿಲ್ಲೆ :** ಏಳು ಸುತ್ತಿನ ಅಭೇದ್ಯಕೋಟೆ, ಮದಕರಿ ನಾಯಕ ಮತ್ತು ಒನಕೆ ಓಬವ್ವ ಇಂದಿಗೂ ಮರೆಯಲಾಗದ ಪ್ರಮುಖ ವ್ಯಕ್ತಿಗಳಾಗಿದ್ದಾರೆ.



**ಏಳು ಸುತ್ತಿನ ಕೋಟೆ**

- **ದಾವಣಗೆರೆ ಜಿಲ್ಲೆ :** ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಹೆಸರಾಗಿರುವ ದಾವಣಗೆರೆಯು ದಕ್ಷಿಣ ಭಾರತದಲ್ಲಿಯೇ ಅತಿ ದೊಡ್ಡ ಕೆರೆ  ಶಾಂತಿಸಾಗರ ಕೆರೆಯನ್ನು ಹೊಂದಿದೆ.




- **ಶಿವಮೊಗ್ಗ ಜಿಲ್ಲೆ :** ಜೋಗ ಜಲಪಾತ, ಕುವೆಂಪುರವರ ಮನೆ, ಕರ್ನಾಟಕದ ಭತ್ತದ ಕಣಜ ಎಂದೇ ಪ್ರಸಿದ್ಧವಾದ ಜಿಲ್ಲೆ ಶಿವಮೊಗ್ಗದಲ್ಲಿ ಪ್ರಸಿದ್ಧ ಗುಡವಿ ಪಕ್ಷಿಧಾಮವನ್ನು ಕಾಣಬಹುದು.



**ಜೋಗ ಜಲಪಾತ**

## ಅ) ಹೊಂದಿಸಿ ಬರೆಯಿರಿ :

1) ತುಮಕೂರು - ಬನ್ನೇರುಘಟ್ಟ ______________

2) ಬೆಂಗಳೂರು ನಗರ - ಶಾಂತಿಸಾಗರ ಕೆರೆ ______________

3) ಶಿವಮೊಗ್ಗ - ಮಧುಗಿರಿ ಬೆಟ್ಟ ______________

4) ದಾವಣಗೆರೆ - ಗುಡವಿ ಪಕ್ಷಿಧಾಮ ______________

## ಆ) ನೀಡಿರುವ ಸೂಚನೆಗಳಲ್ಲಿ ಕಂಡುಬರುವ ಜಿಲ್ಲೆಗಳ ಹೆಸರುಗಳನ್ನು ಬರೆಯಿರಿ :

1) ______________ 2) ______________ 3) ______________

4) ______________ 5) ______________ 6) ______________

7) ______________ 8) ______________ 9) ______________

## ಇ) ನೀಡಿರುವ ಜಿಲ್ಲೆಗಳ ಒಂದೊಂದು ವೈಶಿಷ್ಟ್ಯತೆಯನ್ನು ಗುರ್ತಿಸಿ :

1) ರಾಮನಗರ ____________________

2) ಕೋಲಾರ ____________________

3) ಚಿಕ್ಕಬಳ್ಳಾಪುರ ____________________

4) ಬೆಂಗಳೂರು ನಗರ ____________________

5) ಶಿವಮೊಗ್ಗ ____________________

## ಈ) ಪೂರ್ಣಗೊಳಿಸಿ :

1) ತೆಂಗಿನಕಾಯಿ ಬೆಳೆಗೆ ಪ್ರಸಿದ್ಧವಾದ ಜಿಲ್ಲೆ ______________

2) ಏಳು ಸುತ್ತಿನ ಕೋಟೆ ಹೊಂದಿರುವ ಜಿಲ್ಲೆ ______________

3) ದಕ್ಷಿಣಭಾರತದ ದೊಡ್ಡ ಕೆರೆಯಿರುವ ಜಿಲ್ಲೆ______________

4) ಕುವೆಂಪುರವರ ಮನೆಯಿರುವುದು ________________

## ಉ) ನೀಡಿರುವ ಚಿತ್ರಪಟಗಳನ್ನು ಗಮನಿಸಿ ನಂತರ ಅವು ಯಾವ ಜಿಲ್ಲೆಗೆ ಸೇರಿವೆ ಹೆಸರಿಸಿ.


- ________________


- ________________


- ________________


- ________________